
# ಸರಕು ಸಮೇತ ಟ್ರಕ್ ಕಳ್ಳತನ

**ಬೆಂಗಳೂರು, ಜು.11**-ಪಾರ್ಕಿಂಗ್ ಜಾಗದಲ್ಲಿ ನಿಲ್ಲಿಸಲಾಗಿದ್ದ ಟ್ರಕ್‌ನ್ನು ಸರಕು ಸಮೇತ ಕಳ್ಳತನ ಮಾಡಿರುವ ಘಟನೆ ಭಾರತಿನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿನಡೆದಿದೆ. ಸೆಂಟ್‌ಜಾನ್ ಚರ್ಚ್ ರಸ್ತೆಯ ಕೋಲ್ಸ್ ಪಾರ್ಕಿಂಗ್ ಜಾಗದಲ್ಲಿ ಸರಕು ತುಂಬಿದ್ದ ಟ್ರಕ್‌ನ್ನು ನಿಲ್ಲಿಸಲಾಗಿತ್ತು. ಮುಜಾಮಿಲ್ ಮೊಹಮ್ಮದ್ ಎಂಬುವರಿಗೆ ಸೇರಿದ ಟ್ರಕ್‌ನ್ನು ಕಳ್ಳರು ಪಾರ್ಕಿಂಗ್ ಸ್ಥಳದಿಂದ ಕಳ್ಳತನ ಮಾಡಿದ್ದು, ಇದರ ಒಟ್ಟು ಮೌಲ್ಯ 5 ಲಕ್ಷ ರೂ. ಎಂದು ಅಂದಾಜಿಸಲಾಗಿದೆ. ಈ ಸಂಬಂಧ ಭಾರತಿನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಸದನದಲ್ಲಿ ಕಾವೇರಿದ ವಾತಾವರಣ ನಡುವೆ ಕಂಡು ಬಂದ ದೃಶ್ಯಗಳಿವು.



ವಿಧಾನ ಮಂಡಲ ಅಧಿವೇಶನ ವೀಕ್ಷಿಸಲು ಆಗಮಿಸಿದ್ದ ಶಾಲಾ ಮಕ್ಕಳು.

## ಡಿವೈಎಸ್ಪಿ ಆತ್ಮಹತ್ಯೆ ಪ್ರಕರಣ

# ಮೇಲ್ಮನೆಯಲ್ಲಿ ಸಿಬಿಐ ತನಿಖೆಗೆ ಪಟ್ಟು

**ಬೆಂಗಳೂರು, ಜು.11**-ರಾಜ್ಯದಲ್ಲಿ ನಡೆದಿರುವ ಡಿವೈಎಸ್ಪಿ ಗಣಪತಿ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಚಿವ ಜಾರ್ಜ್ ಅವರ ರಾಜೀನಾಮೆ ಪಡೆಯಬೇಕು. ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ ಅವರನ್ನು ಬಂಧಿಸಿ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಬೇಕು, ಅಲ್ಲಿಯವರೆಗೆ ನಮ್ಮ ಹೋರಾಟ ನಿರಂತರವಾಗಿರುತ್ತದೆ ಎಂದು ಪ್ರತಿಪಕ್ಷದ ನಾಯಕ ಈಶ್ವರಪ್ಪ ಹೇಳಿದರು.

ಕಲಾಪ ಆರಂಭದಲ್ಲಿ ಈ ಬಗ್ಗೆ ಪ್ರಸ್ತಾಪಿಸಿದ ಅವರು, ರಾಜ್ಯದಲ್ಲಿ ಜನಸಾಮಾನ್ಯರ ಎದೆ ಝಲ್ ಎನ್ನುವಂತಹ ಘಟನೆಗಳು ನಡೆಯುತ್ತಿವೆ. ಶ್ರೀಸಾಮಾನ್ಯರ ರಕ್ಷಣೆ ಮಾಡುವ ಪೊಲೀಸರಿಗೆ ರಕ್ಷಣೆ ಇಲ್ಲದಂತಾಗಿ ಆತ್ಮಹತ್ಯೆ ಮಾಡಿಕೊಳ್ಳುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

ಮೈಸೂರು ಜಿಲ್ಲಾಧಿಕಾರಿ ಶಿಖಾ ಅವರ ಮೇಲೆ ಸಿಎಂ ಆಪ್ತ ಮರಿಗೌಡ ಧಮ್ಕಿ ಹಾಕಿದ್ದು, ದೂರು ದಾಖಲಾಗಿದ್ದರೂ ಅವರನ್ನು ಬಂಧಿಸಿಲ್ಲ. ಜಿಲ್ಲಾಧಿಕಾರಿಗೆ ರಕ್ಷಣೆಯಿಲ್ಲವೆಂದ ಮೇಲೆ ಜನಸಾಮಾನ್ಯರಿಗೆ ಎಲ್ಲಿ ರಕ್ಷಣೆ ಸಿಗುತ್ತದೆ ಎಂಬ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಗುಡುಗಿದರು.

ಡಿವೈಎಸ್ಪಿ ಗಣಪತಿ ಆತ್ಮಹತ್ಯೆಗೂ ಮುನ್ನ ಹೇಳಿಕೆ ಕೊಟ್ಟರೂ, ಅವರ ಪತ್ನಿ-ಮಕ್ಕಳು ದೂರು ನೀಡಿದರೂ ಈವರೆಗೆ ಸಚಿವರು ಮತ್ತು ಇಬ್ಬರು ಪೊಲೀಸ್ ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಾಗಿಲ್ಲ.

ಸಾಯುವ ಮುನ್ನ ನೀಡುವ ಹೇಳಿಕೆ ಆಧರಿಸಿ ದೂರು ದಾಖಲಿಸಬೇಕೆಂದು ಸುಪ್ರೀಂಕೋರ್ಟ್ ತೀರ್ಪು ನೀಡಿದ್ದರೂ ಯಾರ ವಿರುದ್ಧವೂ ದೂರು ದಾಖಲಿಸಿಲ್ಲ. ಸರ್ಕಾರ ಇದೆಯೇ ಎಂಬ ಬಗ್ಗೆ ಅನುಮಾನ ಕಾಡುತ್ತಿದೆ.

ಗಣಪತಿಯವರು ರೌಡಿಗಳಿಗೆ ಸಿಂಹಸ್ವಪ್ನವಾಗಿದ್ದರು. ಕೊಡಗಿನ ಗಂಡುಗಲಿಗಳ ನಾಡಲ್ಲಿ ಹುಟ್ಟಿದ ವ್ಯಕ್ತಿ. ಅಂಥವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದರೆ ಅವರ ಮನಸ್ಸಿಗೆ ಎಷ್ಟು ನೋವಾಗಿರಬೇಕು ಎಂದು ಹೇಳಿದರು.

ಈ ಪ್ರಕರಣದಲ್ಲಿ ಜಾರ್ಜ್ ಕೈವಾಡವಿಲ್ಲ ಎಂದು ಗೃಹ ಸಚಿವರು ಹೇಳುತ್ತಾರೆ, ಆತ್ಮಹತ್ಯೆಗೆ ಬೇರೆ ಕಾರಣವಿರಬಹುದೆಂದು ಮುಖ್ಯಮಂತ್ರಿ ಹೇಳುತ್ತಾರೆ. ಸರ್ಕಾರ ತಪ್ಪಿತಸ್ಥರ ಬೆಂಬಲಕ್ಕೆ ನಿಲ್ಲುತ್ತಿದೆ ಎಂದು ಈಶ್ವರಪ್ಪ ಆರೋಪಿಸಿದರು.

ಜಾರ್ಜ್ ಅವರನ್ನು ಸಂಪುಟದಿಂದ ಕೈಬಿಡಬೇಕು, ಅವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿ, ಬಂಧಿಸಿ ಪ್ರಕರಣವನ್ನು ಸಿಬಿಐಗೆ ವಹಿಸಬೇಕು, ಅವರು ಮಂತ್ರಿಯಾಗಿಯೇ ಉಳಿದರೆ ಸತ್ಯಾಂಶ ಹೊರಬರುವುದಿಲ್ಲ ಎಂದು ಈಶ್ವರಪ್ಪ ಆಕ್ರೋಶ ವ್ಯಕ್ತಪಡಿಸಿದರು.

ಇದಕ್ಕೆ ದನಿಗೂಡಿಸಿದ ಜೆಡಿಎಸ್‌ನ ಶರವಣ, ಈ ಸರ್ಕಾರದಲ್ಲಿ ದಕ್ಷ ಅಧಿಕಾರಿಗಳಿಗೆ ರಕ್ಷಣೆ ಇಲ್ಲ. ಡಿ.ಕೆ.ರವಿಯಿಂದ ಗಣಪತಿ ಸಾವಿನವರೆಗೂ ಯಾವುದೇ ಅಧಿಕಾರಿಗಳಿಗೆ ನ್ಯಾಯ ಸಿಕ್ಕಿಲ್ಲ ಎಂದು ಗುಡುಗಿದರು.

ಈ ಸಂದರ್ಭದಲ್ಲಿ ಸದನಕ್ಕೆ ಆಗಮಿಸಿದ ಗೃಹ ಸಚಿವರೂ ಆದ ಸಭಾನಾಯಕ ಜಿ.ಪರಮೇಶ್ವರ್ ಅವರು ಘಟನೆ ಕುರಿತು ಹೇಳಿಕೆ ನೀಡಲು ಮುಂದಾದರು. ಇದಕ್ಕೆ ಪ್ರತಿಪಕ್ಷಗಳು ಆಸ್ಪದ ನೀಡಲಿಲ್ಲ. ಈಗಾಗಲೇ ನಿಲುವಳಿ ಪ್ರಸ್ತಾಪ ಮಂಡಿಸಲಾಗಿದೆ. ಚರ್ಚೆ ನಂತರ ಹೇಳಿಕೆ ನೀಡಲಿ ಎಂದು ಹೇಳಿದರು.

# ಆತ್ಮವಂಚನೆ ಮಾಡಿಕೊಳ್ಳದಂತೆ ಸಿಎಂ ಕೆಲಸ ಮಾಡಲಿ: ಈಶ್ವರಪ್ಪ

**ಬೆಂಗಳೂರು, ಜು.11**-ಮುಖ್ಯಮಂತ್ರಿ ಸಿದ್ದರಾಮಯ್ಯ ಕೇವಲ ಮೂರು ಜನರಿಗೆ ಮುಖ್ಯಮಂತ್ರಿಯಾಗದೆ, ಆರೂವರೆ ಕೋಟಿ ಜನರ ಮುಖ್ಯಮಂತ್ರಿಯಾಗಿ ಆತ್ಮವಂಚನೆ ಮಾಡಿಕೊಳ್ಳದಂತೆ ಕೆಲಸ ಮಾಡಬೇಕೆಂದು ಮೇಲ್ಮನೆ ಪ್ರತಿಪಕ್ಷದ ನಾಯಕ ಈಶ್ವರಪ್ಪ ಹೇಳಿದರು.

ನಿಲುವಳಿ ಸೂಚನೆಯಡಿ ಚರ್ಚೆಗೆ ಅವಕಾಶ ಕೋರಿ ಮಾತನಾಡುತ್ತಿದ್ದ ಸಂದರ್ಭದಲ್ಲಿ ಗಣಪತಿ ಆತ್ಮಹತ್ಯೆ ಪ್ರಕರಣದಲ್ಲಿ ಸಚಿವ ಜಾರ್ಜ್ ಹಾಗೂ ಇಬ್ಬರು ಅಧಿಕಾರಿಗಳನ್ನು ರಕ್ಷಣೆ ಮಾಡಲೇಬೇಕು ಎಂದು ಮುಖ್ಯಮಂತ್ರಿಗಳು ಮುಂದಾದರೆ ಅವರು ರಾಜ್ಯದ ಮುಖ್ಯಮಂತ್ರಿ ಹೇಗಾಗುತ್ತಾರೆಂದು ಪ್ರಶ್ನಿಸಿದರು.

ಸಿಎಂ ಸಿದ್ದರಾಮಯ್ಯ ಆತ್ಮವಂಚನೆ ಮಾಡಿಕೊಳ್ಳದಂತೆ ಕೆಲಸ ಮಾಡಬೇಕು, ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಬೇಕು, ಇಲ್ಲದಿದ್ದರೆ ರಾಜ್ಯದ ಎಲ್ಲಾ ಪೊಲೀಸ್ ಠಾಣೆಗಳಿಗೆ ಬೀಗ ಹಾಕಲಿ ಎಂದು ಅವರು ಹೇಳಿದರು.

# ಪ್ಲ್ಯಾಸ್ಟಿಕ್ ಉತ್ಪನ್ನಗಳ ಬಳಕೆ ಒಂದು ಲಕ್ಷ ರೂ. ದಂಡ

**ಬೆಂಗಳೂರು, ಜು.11**- ಪ್ಲ್ಯಾಸ್ಟಿಕ್ ಉತ್ಪನ್ನಗಳನ್ನು ಬಳಕೆ ಮಾಡುತ್ತಿದ್ದ ಹಾಗೂ ಸ್ವಚ್ಛತೆ ಕಾಪಾಡದ ಶಿವಸಾಗರ್ ಹೊಟೇಲ್ ಮಾಲೀಕರಿಗೆ ಬಿಬಿಎಂಪಿ ಆರೋಗ್ಯ ಅಧಿಕಾರಿಗಳು ಒಂದು ಲಕ್ಷ ರೂ. ದಂಡ ವಿಧಿಸಿದ್ದಾರೆ.

ಪೂರ್ವವಲಯದ ಆರೋಗ್ಯ ಅಧಿಕಾರಿಗಳು ಇಂದು ಎಂ.ಜಿ.ರಸ್ತೆಯ ಸುತ್ತಮುತ್ತಲ ಹೊಟೇಲ್ ಹಾಗೂ ಮಳಿಗೆಗಳ ಮೇಲೆ ದಾಳಿ ನಡೆಸಿದ ವೇಳೆ ಯುಟಿಲಿಟಿ ಕಟ್ಟಡದಲ್ಲಿರುವ ಶಿವಸಾಗರ್ ಹೊಟೇಲ್ ಮೇಲೆ ದಾಳಿ ನಡೆಸಿದಾಗ ಪ್ಲ್ಯಾಸ್ಟಿಕ್ ಲೋಟಗಳ ಬಳಕೆ ಕಂಡು ಬಂತು. ಜೊತೆಗೆ ಸ್ವಚ್ಛತೆ ಕಾಪಾಡುವುದರಲ್ಲಿ ವಿಫಲವಾಗಿದ್ದರು. ಸ್ಥಳದಲ್ಲೇ ಒಂದು ಲಕ್ಷ ರೂ. ದಂಡ ವಿಧಿಸಿದರು.

ಅದೇ ರೀತಿ ದಿ ಲಾಸ್ಟ್ ಕಾರ್ನಿವಾಲ್, ಬ್ರಿಗೇಡ್ ರಸ್ತೆಯ ಹಲವಾರು ಮಳಿಗೆಗಳ ಮೇಲೆ ದಾಳಿ ನಡೆಸಿ ಕಳಪೆ ಗುಣಮಟ್ಟದ ಪ್ಲ್ಯಾಸ್ಟಿಕ್ ಉತ್ಪನ್ನಗಳನ್ನು ವಶಪಡಿಸಿಕೊಂಡು ದಂಡ ವಿಧಿಸಿದರು. ಅದೇ ರೀತಿ ಸ್ಟಾರ್ ಬರ್ಗ್ ಕಾಫಿಶಾಪ್ ಮೇಲೆ ದಾಳಿ ನಡೆಸಿ ಪ್ಲ್ಯಾಸ್ಟಿಕ್ ಕಪ್‌ಗಳು, ರೋಲರ್, ಪರ್ಸಲ್ ವಸ್ತುಗಳನ್ನು ವಶಪಡಿಸಿಕೊಂಡು 50 ಸಾವಿರ ರೂ. ದಂಡ ವಿಧಿಸಿದ್ದಾರೆ.

❑ ಮೊದಲನೆ ಪುಟದಿಂದ

# ಭಾಗ್ಯದ ಗುದ್ದಾಟ

ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆತ್ಮಹತ್ಯೆ ಭಾಗ್ಯ ಕರುಣಿಸಿದ ಸರ್ಕಾರ, ಸಚಿವ ಜಾರ್ಜ್ ರಾಜೀನಾಮೆ ನೀಡಲಿ ಎಂಬ ಫಲಕಗಳನ್ನು ಪ್ರದರ್ಶಿಸಿ ಕಾಗದಪತ್ರಗಳನ್ನು ಹರಿದು ಬಿಸಾಡಿದರು.

ಧರಣಿ ಸಂದರ್ಭದಲ್ಲಿ ಗದ್ದಲ ಗೊಂದಲಗಳ ನಡುವೆ ಸಚಿವರು ತಮ್ಮ ಹೇಳಿಕೆ ಮಂಡಿಸಿದರು. ಸದನದ ಹಾದಿ ತಪ್ಪುತ್ತಿರುವುದನ್ನು ಗಮನಿಸಿದ ಸಭಾಧ್ಯಕ್ಷರು ಕೆಲಕಾಲ ಸದನವನ್ನು ಮುಂದೂಡಿದರು.

ಮತ್ತೆ ಸದನ ಸಮಾವೇಶಗೊಂಡಾಗ ಯಥಾರೀತಿ ಬಿಜೆಪಿ-ಜೆಡಿಎಸ್ ಸದಸ್ಯರು ಧರಣಿ ಮುಂದುವರೆಸಿ ಘೋಷಣೆ ಕೂಗಿದರು.

ಇದರ ನಡುವೆ ಚರ್ಚೆಗೆ ಒಪ್ಪಿದ ಪ್ರತಿಪಕ್ಷಗಳು ಮತ್ತೆ ಸದನದಲ್ಲಿ ಚರ್ಚೆಗೆ ಮುಂದಾದವು.

ಜಗದೀಶ್ ಶೆಟ್ಟರ ಮಾತನಾಡಿ, ಆತ್ಮಹತ್ಯೆ ಪ್ರಕರಣ ಮುಚ್ಚಿ ಹಾಕಲು ಸರ್ಕಾರ ತರಾತುರಿಯಲ್ಲಿ ಹೇಳಿಕೆ ನೀಡಿದ್ದು, ತರಾತುರಿಯಲ್ಲಿ ಹೇಳಿಕೆ ನೀಡುವ ಅಗತ್ಯವೇನಿತ್ತು. ಸಭಾಧ್ಯಕ್ಷರ ಮನವಿಗೆ ಮನ್ನಣೆ ಚರ್ಚೆಗೆ ಬಂದಿದ್ದೇವೆ ಎಂದು ಹೇಳಿದರು.

ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಮಾತನಾಡಿ, ಗಣಪತಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅವರ ಆತ್ಮಹತ್ಯೆಗೆ ಕಾರಣವನ್ನು ಉತ್ತರ ಕೊಟ್ಟ ಮೇಲೆ ಯಾವ ಬಗ್ಗೆ ಚರ್ಚೆ ಮಾಡಬೇಕು. ಸರ್ಕಾರದ ಕಾರ್ಯ ವೈಖರಿಯನ್ನು ಟೀಕಿಸಿದರು.

ಇದಕ್ಕೆ ದನಿಗೂಡಿಸಿದ ಅಶೋಕ್, ಗಣಪತಿಯವರು ಜಾರ್ಜ್ ಮತ್ತು ಅಧಿಕಾರಿಗಳ ಕಿರುಕುಳದ ಬಗ್ಗೆ ಸಂದರ್ಶನ ನೀಡಿದ್ದಾರೆ. ಇದನ್ನು ಸರ್ಕಾರ ತಿರುಚುವಂತಹ ಪ್ರಯತ್ನ ಮಾಡುತ್ತಿದೆ. ಸಚಿವರನ್ನು ಉಳಿಸಿಕೊಳ್ಳಲು ಷಡ್ಯಂತ್ರ ಮಾಡಲಾಗುತ್ತಿದೆ ಎಂದು ಆರೋಪಿಸಿದರು.

ಡಿವೈಎಸ್‌ಪಿ ಗಣಪತಿ ಅವರು ಆತ್ಮಹತ್ಯೆಗೂ ಮುನ್ನ ನೀಡಿರುವ ಹೇಳಿಕೆಯಲ್ಲಿ ನನ್ನ ಹೆಸರು ಹೇಳಿಲ್ಲ, ಸರಿಯಾದ ದಾಖಲೆ, ಪುರಾವೆ ಗಳಿಲ್ಲದೆ ನನ್ನ ಮೇಲೆ ಆರೋಪ ಮಾಡಲಾಗಿದೆ ಎಂದು ಕೆ.ಜೆ.ಜಾರ್ಜ್ ಆಕ್ಷೇಪ ವ್ಯಕ್ತಪಡಿಸಿದರು.

ವಿಧಾನಸಭೆಯ ಕಲಾಪದಲ್ಲಿ ಚರ್ಚೆ ನಡೆಯುತ್ತಿದ್ದ ವೇಳೆ ಬಿಜೆಪಿ ಶಾಸಕ ಸಿ.ಟಿ.ರವಿ ಅವರು ಡಿವೈಎಸ್‌ಪಿ ಗಣಪತಿ ಅವರನ್ನು ಮಾನಸಿಕ ಅಸ್ವಸ್ಥ ಎಂದು ಬಿಂಬಿಸುವ ಪ್ರಯತ್ನ ನಡೆಯುತ್ತಿದೆ. ಒಂದು ವೇಳೆ ಅವರು ಮಾನಸಿಕ ಅಸ್ವಸ್ಥರೇ ಆಗಿದ್ದರೆ ಅದಕ್ಕೆ ಕಾರಣವಾಗಿರುವುದು ಅವರೇ ಹೇಳಿರುವಂತೆ ಸಚಿವ ಕೆ.ಜೆ.ಜಾರ್ಜ್, ಹಿರಿಯ ಐಪಿಎಸ್ ಅಧಿಕಾರಿಗಳಾದ ಎ.ಎಂ.ಪ್ರಸಾದ್ ಹಾಗೂ ಪ್ರಣಬ್ ಮೊಹಂತಿ ಅವರೇ ಕಾರಣ ಎಂದರು.

ಗಣಪತಿ ಅವರು ಈ ಮೂವರ ಹೆಸರೇಳಲು ಕಾರಣವೇನು ? ಮುಖ್ಯಮಂತ್ರಿ ಅಥವಾ ರಮಾನಾಥರೈ ಅವರ ಹೆಸರನ್ನು ಏಕೆ ಹೇಳಲಿಲ್ಲ ಎಂದು ಪ್ರಶ್ನಿಸಿದರು.

ಈ ಸಂದರ್ಭದಲ್ಲಿ ಜಾರ್ಜ್ ಮಧ್ಯಪ್ರವೇಶಿಸಿ, ಗಣಪತಿ ನನ್ನ ಹೆಸರು ಹೇಳಲಿಲ್ಲ, ದಾಖಲೆ, ಆಧಾರಗಳು ಇಲ್ಲದೆ ನನ್ನವಿರುದ್ಧ ಆರೋಪ ಮಾಡಲಾಗುತ್ತಿದೆ ಎಂದು ಆಕ್ಷೇಪಿಸಿದರು.

ಕೊಡುಗು ಜಿಲ್ಲೆಯ ಅಪ್ಪಚ್ಚು ರಂಜನ್ ಅವರು ಗಣಪತಿ ಹೇಳಿಕೆಯ ಸಿಡಿ ಇದೆ. ಒಂದು ವೇಳೆ ನಿಮ್ಮ ಹೆಸರು ಪ್ರಸ್ತಾಪವಾಗಿದ್ದರೆ ರಾಜೀನಾಮೆ ನೀಡಿ ಹೋಗುತ್ತೀರಾ? ಜೈಲಿಗೆ ಹೋಗಲು ಸಿದ್ಧವೆ ಎಂದು ತಿರುಗೇಟು ನೀಡಿದರು.

ಈ ಹಂತದಲ್ಲಿ ಸಚಿವ ರಮಾನಾಥರೈ ಅವರು, ನಿಮ್ಮ ವಿರುದ್ಧವೂ ಕ್ರಿಮಿನಲ್ ಪ್ರಕರಣ ಇದೆ ಎಂದು ಅಪ್ಪಚ್ಚು ರಂಜನ್ ಅವರನ್ನು ಕೆರಳಿಸಿದರು. ಇದರಿಂದ ಕೆರಳಿದ ಅಪ್ಪಚ್ಚು ರಂಜನ್, ನನ್ನ ವಿರುದ್ಧದ ಆರೋಪಗಳಿಗೆ ದಾಖಲೆಗಳಿದ್ದರೆ ತೆಗೆದುಕೊಂಡು ಬಾರಯ್ಯ ಎಂದು ಏಕವಚನದಲ್ಲಿ ಸವಾಲು ಹಾಕಿದ್ದಲ್ಲದೆ, ಕೊಲೆಗಡುಕ ಸಚಿವರು ಎಂದು ಕಿಡಿಕಾರಿದರು.

ಏಕವಚನ ಪ್ರಯೋಗಕ್ಕೆ ಸಚಿವರಾದ ಎಚ್.ಎಸ್.ಮಹದೇವಪ್ರಸಾದ್, ಟಿ.ಬಿ.ಜಯಚಂದ್ರ, ದೇಶಪಾಂಡೆ ಆಕ್ಷೇಪ ವ್ಯಕ್ತಪಡಿಸಿದರು. ಸಭಾಧ್ಯಕ್ಷರು ಕೆಲ ಚರ್ಚೆಗಳನ್ನು ಕಡತದಿಂದ ತೆಗೆದು ಹಾಕಿದರು.

ಮಾತು ಮುಂದುವರೆಸಿದ ಪ್ರತಿಪಕ್ಷದ ನಾಯಕ ಜಗದೀಶ್ ಶೆಟ್ಟರ್, ಗಣಪತಿ ಅವರ ಹೇಳಿಕೆಗಳನ್ನು ಯಥಾವತ್ತು ಪ್ರಕಟಿಸಿದ್ದ ಪತ್ರಿಕೆಗಳ ವರದಿಯನ್ನು ಉಲ್ಲೇಖಿಸುತ್ತಿದ್ದಾಗ, ಸಭಾಧ್ಯಕ್ಷ ಕೋಳಿವಾಡ ಅವರು, ಸಿಡಿಯೂ ಇದೆಯೇ ಅಥವಾ ಪತ್ರಿಕೆಗಳಲ್ಲಿ ಬಂದಿರುವ ವರದಿಗಳನ್ನು ಓದುತ್ತಿದ್ದೀರಾ ಎಂದು ಪ್ರಶ್ನಿಸಿದರು.

ಸಿಡಿ ಇದೆ. ಅದನ್ನು ಇಲ್ಲಿ ಪ್ರದರ್ಶಿಸಲು ಅವಕಾಶ ಮಾಡಿಕೊಡಿ ಎಂದು ಬಿಜೆಪಿ ಶಾಸಕರು ಪಟ್ಟು ಹಿಡಿದರು.

# ಒಂದು ಪೈಸೆನೂ ಖರ್ಚಾಗಿಲ್ಲ

ಯೋಜನಾ ವೆಚ್ಚದ ಪಾಲನ್ನು ಸಮುದಾಯದ ಅಭ್ಯುದಯಕ್ಕೆ ಮೀಸಲಿಟ್ಟು ಅದಕ್ಕಾಗಿ ಸಾವಿರಾರು ಕೋಟಿ ರೂ.ಗಳನ್ನು ಸರ್ಕಾರ ಘೋಷಿಸಿದೆ.

ಇಂತಹ ಯೋಜನೆಯನ್ನು ಜಾರಿಗೆ ತಂದಿದ್ದು, ದೇಶದಲ್ಲೇ ಎರಡನೆ ರಾಜ್ಯ ಕರ್ನಾಟಕ ಎಂಬ ಹೆಗ್ಗಳಿಕೆಯೂ ಇದೆ. ಶೋಷಿತ ವರ್ಗಗಳಿಗೆ ಇದೊಂದು ಬಂಪರ್ ಯೋಜನೆಯೆಂದೇ ಹೇಳಬೇಕು. ಈ ಕ್ರಾಂತಿಕಾರಿ ವಿಧೇಯಕದ ಅಂಕಿ-ಅಂಶಗಳ ಪ್ರಕಾರ ಅಂದಿನಿಂದ (2012-13ರಿಂದ 2016-17ರವರೆಗೆ) ಇಂದಿನವರೆಗೆ ಆ ಜನರ ಅಭ್ಯುದಯಕ್ಕೆ ಬಳಸಬೇಕಿದ್ದರೂ ಈ ಹಣವನ್ನು ಸಂಪೂರ್ಣವಾಗಿ ವಿನಿಯೋಗಿಸಿರುವ ಉದಾಹರಣೆಯೇ ಇಲ್ಲ.

ಯೋಜನೆ ಆರಂಭಗೊಂಡಾಗ 2012-13ರಲ್ಲಿ ಪರಿಶಿಷ್ಟ ಜಾತಿ ವಿಶೇಷ ಯೋಜನೆ (ಎಸ್‌ಸಿಎಸ್‌ಪಿ)ಗೆ 5125.00 ಕೋಟಿ ಮತ್ತು ಪರಿಶಿಷ್ಟ ಪಂಗಡಕ್ಕೆ (ಟಿಎಸ್‌ಪಿ) 2075.60 ಕೋಟಿ ಸೇರಿ ಒಟ್ಟು 7200.00 ಕೋಟಿ ರೂ. ಗಳನ್ನು ಮೀಸಲಿಡಲಾಗಿತ್ತು.

ನಂತರದ ಆಯವ್ಯಯದ ಯೋಜನಾಗಾತ್ರಗಳು ವೃದ್ಧಿಯಾಗುತ್ತಿದ್ದಂತೆ ಮೀಸಲಿಡುತ್ತಿದ್ದ ಹಣ ಕೂಡ ಹೆಚ್ಚಾಗುತ್ತಾ ಹೋಯಿತು. ಪ್ರಸಕ್ತ ಈ ಆರ್ಥಿಕ ವರ್ಷದ ಸಾಲಿಗೆ ಯೋಜನಾ ವೆಚ್ಚದಲ್ಲಿ 85375.00 ಕೋಟಿ ರೂ.ಗಳನ್ನು ನೀಡಲಾಗಿದೆ. ಇದರಲ್ಲಿ ಎಸ್‌ಸಿಎಸ್‌ಪಿಗೆ 13976.60 ಕೋಟಿ ರೂ. ಹಾಗೂ ಟಿಎಸ್‌ಪಿಗೆ 5566.36 ಕೋಟಿ ರೂ. ನೀಡಲಾಗಿದೆ. ಒಟ್ಟಾರೆ 19542.96 ಕೋಟಿ ರೂ. ಈಗ ನಿಗದಿಪಡಿಸಲಾಗಿದ್ದರೂ, ಪ್ರಥಮ ತ್ರೈಮಾಸಿಕ (2016-17 ಏಪ್ರಿಲ್ 1ರಿಂದ ಜೂನ್ 30) ಕಳೆದರೂ ಒಂದು ಪೈಸೆ ಕೂಡ ಇದರಲ್ಲಿ ಖರ್ಚಾಗಿಲ್ಲ ಎಂಬುದೇ ವಿಶೇಷ.

ಈಗಾಗಲೇ 2 ಬಾರಿ ಸಮಾಜ ಕಲ್ಯಾಣ ಸಚಿವ ಎಚ್.ಆಂಜನೇಯ ನೇತೃತ್ವದಲ್ಲಿ ಅಧಿಕಾರಿಗಳ ಸಭೆ ನಡೆದರೂ ಕ್ರಿಯಾಯೋಜನೆ ರೂಪಿಸುವಲ್ಲಿಯೇ ಇನ್ನೂ ಕಾಲ ಕಳೆಯಲಾಗುತ್ತಿದೆ. ಈ ವೇಳೆಗೆ ಸರಿಯಾಗಿ ಎಲ್ಲಾ ನಡೆದಿದ್ದರೆ 34,94,49,415 ರೂ.ಗಳನ್ನು ಅರ್ಹ ಫಲಾನುಭವಿಗಳಿಗೆ ಹಂಚ ಬೇಕಾಗಿತ್ತು.

ಕಳೆದ ಸಾಲಿನ ಆಯವ್ಯಯದಲ್ಲಿ ಬಹುತೇಕ ಅಂದರೆ ಶೇ.60ಕ್ಕೂ ಹೆಚ್ಚು ಇಲಾಖೆಗಳು ಪೂರ್ಣ ಹಣ ಬಳಸದೆ ಕಳಪೆ ಸಾಧನೆ ಮಾಡಿರುವುದು ಬಹಿರಂಗಗೊಂಡ ನಂತರ ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯ ಸಚಿವರನ್ನು ತರಾಟೆಗೆ ತೆಗೆದುಕೊಂಡಿದ್ದರು.

ಇದೇ ನಿಟ್ಟಿನಲ್ಲಿ ಇತ್ತೀಚೆಗೆ ನಡೆದ ಸಚಿವ ಸಂಪುಟ ಪುನಾರಚನೆ ಸಂದರ್ಭದಲ್ಲೂ ಕೆಲವರನ್ನು ಸಂಪುಟದಿಂದ ಕೈ ಬಿಡಲಾಗಿದೆ. ಪ್ರಸ್ತುತ ಸಮಾಜ ಕಲ್ಯಾಣ ಇಲಾಖೆಯಲ್ಲಿ ಇಷ್ಟೊಂದು ಭಾರೀ ಮೊತ್ತದ ಹಣ ಇದ್ದರೂ ಕೂಡ ಅದನ್ನು ದಲಿತ ಸಮುದಾಯಗಳ ಅಭ್ಯುದಯಕ್ಕೆ ಹಂಚಲು ಮೀನಾಮೇಷ ಎಣಿಸುತ್ತಿರುವುದು ದಲಿತ ಮುಖಂಡರ ಕಣ್ಣು ಕೆಂಪಗಾಗಿಸಿದೆ.

ಇಚ್ಛಾಶಕ್ತಿ ಕೊರತೆ, ನಿರ್ಲಕ್ಷ್ಯ ಧೋರಣೆ ಎದ್ದು ಕಾಣುತ್ತಿದೆ. ದಲಿತ ಸಮುದಾಯಕ್ಕೆ ಸಿಗಬೇಕಾದ ಹಕ್ಕನ್ನು ಅಧಿಕಾರಿಗಳು ಕಸಿಯುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಮೂರ್ನಾಲ್ಕು ತಿಂಗಳು ಸುಮ್ಮನೆ ಕಾಲ ಕಳೆದ ಮೇಲೆ ಇಷ್ಟೊಂದು ಹಣ ಇನ್ನು ಉಳಿದಿರುವ ಆರೇಳು ತಿಂಗಳಲ್ಲಿ ವ್ಯಯಿಸಲು ಸಾಧ್ಯವೇ ಎಂಬ ಪ್ರಶ್ನೆ ಉದ್ಭವವಾಗಿದೆ.

**ಶಾಸಕರ ಅಧ್ಯಕ್ಷತೆ:** ಇನ್ನೂ ಮುಂದುವರೆದು ಶಾಸಕರಿಗೆ ಫಲಾನುಭವಿಗಳ ಆಯ್ಕೆಗೆ ಇದರಲ್ಲಿ ಅವಕಾಶ ನೀಡಲಾಗಿದೆ. ಇದರಲ್ಲೂ ಕೆಲವೊಂದು ತಾರತಮ್ಯ ನಡೆಯುತ್ತದೆ. ಪಕ್ಷ ರಾಜಕಾರಣ ಮಧ್ಯಪ್ರವೇಶಿಸಿದ್ದರಿಂದ ಅರ್ಹ ಫಲಾನುಭವಿಗಳಿಗೆ ಇದರ ಪ್ರಯೋಜನ ಸಿಗುವುದಿಲ್ಲ ಎಂಬ ವಾದವೂ ಕೂಡ ಇದೆ.

ಇದರ ನಡುವೆ ಕೆಲವರು ನಕಲಿ ಜಾತಿ ಪ್ರಮಾಣ ಪತ್ರಗಳನ್ನು ಸೃಷ್ಟಿಸಿ ದಲಿತರಿಗೆ ಸಿಗಬೇಕಾದ ಸವಲತ್ತುಗಳನ್ನು ಪಡೆದು ವಂಚಿಸುತ್ತಿದ್ದಾರೆ ಎಂಬ ಮಾತುಗಳು ಕೇಳಿ ಬರುತ್ತಿವೆ.

ಈಗಾಗಲೇ ಮೂರೂವರೆ ತಿಂಗಳು ಕಳೆದಿದ್ದು, ಇನ್ನಾದರೂ ಮುಖ್ಯಮಂತ್ರಿಗಳು ಇತ್ತ ಗಮನ ಹರಿಸಿ ಹಳ್ಳ ಹಿಡಿಯುತ್ತಿರುವ ಯೋಜನೆಯನ್ನು ಬೇಗನೆ ಕಾರ್ಯಗತಕ್ಕೆ ತರುತ್ತಾರಾ ಎಂದು ಕಾದುನೋಡಬೇಕು.

# ದಾಹ ನನಗಿಲ್ಲ

ಅಧಿಕಾರಕ್ಕೆ ಆಸೆ ಪಟ್ಟಿಲ್ಲ.ಕಂದಾಯ ಸಚಿವನಾಗಿದ್ದಾಗ ನಾಯಕರ ಕರೆಗೆ ಓಗೊಟ್ಟು ಅದನ್ನು ಬಿಟ್ಟು ಬಂದಿದ್ದೆ. ಎಂದಿಗೂ ಸಾಮಾನ್ಯರಿಂದ ದೂರವಿರಲಿಲ್ಲ. ಹಾಗಾಗಿಯೇ ಅವರೊಂದಿಗೆ ಬೆರೆತು ಕೆಲಸ ಮಾಡಲು ಸಾಧ್ಯವಾಯಿತು.

ಬಹಳಷ್ಟು ಜನ ನಾನು ಬಿಜೆಪಿಗೆ ಸೇರಿದಾಗ ಬೈದರು. ಕಾಂಗ್ರೆಸ್‌ಗೆ ಸೇರಬೇಕಿತ್ತು ಎಂದರು. ನಾನು ಅದ್ಯಾವುದನ್ನೂ ಲೆಕ್ಕಿಸಲಿಲ್ಲ, ಕೆಲಸ ಮಾಡಲು ಮುಂದಾದೆ. ನನ್ನನ್ನು ಚಿಕ್ಕೋಡಿ ಕ್ಷೇತ್ರದಿಂದ ಮೂರು ಬಾರಿ ಗೆಲ್ಲಿಸಿದ್ದಾರೆ. ನನ್ನ ಕೆಲಸವೇ ಜನರನ್ನು ಹತ್ತಿರಕ್ಕೆ ತಂದಿದೆ. ಹಾಗಾಗಿ ಬೇರೆ ಬೇರೆ ಪಕ್ಷದ ಮೂಲಕ ಕಣಕ್ಕಿಳಿದರೂ ಜನ ನನ್ನನ್ನು ಒಪ್ಪಿ ದೊಡ್ಡ ಜವಾಬ್ದಾರಿ ಕೊಟ್ಟಿದ್ದಾರೆ.

ನನಗೆ ಬಹಳ ಇಷ್ಟವಾದ ಇಲಾಖೆ ದೊರೆತಿದೆ. ನನಗೆ ಅದರಲ್ಲಿ ಆಸಕ್ತಿಯೂ ಇದೆ. ಜೊತೆಗೆ ಕೆಲಸ ಮಾಡುವ ಛಲ ಇದೆ. ಇದು ಬಯಸದೆ ಬಂದ ಭಾಗ್ಯ. ಅದನ್ನು ಸರಿಯಾಗಿ ನಿರ್ವಹಿಸಿ ತೋರುತ್ತೇನೆ ಎಂದು ಭರವಸೆ ವ್ಯಕ್ತಪಡಿಸಿದರು.

ನನಗೆ ತುಂಬಾ ಸಂತೋಷವಾಗುತ್ತಿದೆ. ಆದರೆ, ನೀವೆಲ್ಲ ನನ್ನನ್ನು ಕ್ಷಮಿಸಬೇಕು. ಬಹಳಷ್ಟು ಕಾಲ ನಾನು ಪಕ್ಷದ ಕಚೇರಿಗೆ ಬರಲಾಗಲಿಲ್ಲ. ನಾನು ನನ್ನ ಲೋಕಸಭಾ ಕ್ಷೇತ್ರದ ಜನರ ಕಷ್ಟ-ನಷ್ಟಗಳಿಗೆ ಸ್ಪಂದಿಸುತ್ತಾ ಅಲ್ಲಿನ ಸಮಸ್ಯೆಗಳನ್ನು ಅವಲೋಕಿಸುತ್ತಾ ಅಲ್ಲೇ ಸುತ್ತಾಡುತ್ತಿದ್ದೆ. ಇನ್ನು ಮುಂದೆ ಈ ರೀತಿ ಆಗುವುದಿಲ್ಲ, ನಾನು ಎಲ್ಲಾ ಕಾರ್ಯಕರ್ತರೊಂದಿಗೆ ಸಂಪರ್ಕ ವಿಟ್ಟುಕೊಳ್ಳುತ್ತೇನೆ ಎಂದು ತಿಳಿಸಿದರು.

ನನಗೆ ನಮ್ಮ ಕಾರ್ಯಕರ್ತರ ಬಗ್ಗೆ ಹೆಮ್ಮೆ ಎನಿಸುತ್ತದೆ. ಪಕ್ಷದ ಸಲುವಾಗಿ, ನಮ್ಮ ಸಲುವಾಗಿ ಅವರು ಜಗಳ ಮಾಡುತ್ತಾರೆ. ಇದನ್ನು ನೋಡಿದಾಗ ಅಭಿಮಾನ ಹೆಚ್ಚಾಗುತ್ತದೆ. ಮೊದಲಿನಿಂದಲೂ ಪಕ್ಷವೆಂದರೆ ಅಭಿಮಾನ. ಇಷ್ಟು ವರ್ಷ ನಾನು ರಾಜಕಾರಣದಲ್ಲಿದ್ದೆ. ನನ್ನ ಸಿದ್ಧಾಂತ ನನ್ನ ಜೊತೆಗಿದೆ. ಎಲ್ಲರ ಜೊತೆ ಬೆರೆತರೆ ಜನಕ್ಕೆ ಹತ್ತಿರವಾಗುತ್ತೇನೆ ಎಂದರು.

ನಾನೇನೂ ದೊಡ್ಡ ಮನುಷ್ಯನಲ್ಲ. ನಿಮ್ಮೆಲ್ಲರ ಆಶೀರ್ವಾದ, ಹಾರೈಕೆಯಿಂದ ದೊಡ್ಡವನಾಗಿದ್ದೇನೆ. ನನ್ನಷ್ಟಕ್ಕೇ ನಾನೇ ದೊಡ್ಡವನಾಗಲು ಸಾಧ್ಯವಿಲ್ಲ. ನೀವೆಲ್ಲರೂ ಆ ಪಟ್ಟವನ್ನು ನನಗೆ ನೀಡಿದ್ದೀರಿ. ನಾನೆಂದು ನಾನು ದೊಡ್ಡವನು ಎಂದು ತಿಳಿದಿಲ್ಲ. ನಿಮ್ಮ ವಿಶ್ವಾಸಕ್ಕೆ ಚಿರಋಣಿ ಎಂದರು.

ಚಿಕ್ಕೋಡಿಗೆ ನಾನು ಆಯ್ಕೆಯಾಗಿ ಹೋದಾಗ ಹಿಂದಿನ ಮಂತ್ರಿಗಳು ಕುಡಿಯುವ ನೀರಿನ ವ್ಯವಸ್ಥೆ ಮಾಡಿರಲಿಲ್ಲ. ಒಂದು ಗಂಟೆ ರಾತ್ರಿಯಲ್ಲಿ ಹೆಣ್ಣು ಮಕ್ಕಳು ನೀರು ತರುವುದನ್ನು ಕಂಡು ಅಂದೇ ಪ್ರತಿಜ್ಞೆ ಮಾಡಿದ್ದೆ. ಅದರಂತೆ ಸತತ ಎರಡು ವರ್ಷ ಪ್ರಯತ್ನ ಮಾಡಿ ಚಿಕ್ಕೋಡಿಗೆ ನೀರು ತಂದೆ. ಇದೀಗ ಪ್ರಧಾನ ಮಂತ್ರಿಗಳು ನನ್ನ ಮೇಲೆ ವಿಶ್ವಾಸವಿಟ್ಟು, ಅತ್ಯಂತ ಜವಾಬ್ದಾರಿಯುತ ಸ್ಥಾನ ನೀಡಿದ್ದಾರೆ. ಅದನ್ನು ಶ್ರದ್ಧೆ, ಭಕ್ತಿಯಿಂದ ನಿಭಾಯಿಸುತ್ತೇನೆ ಎಂದು ಆಶ್ವಾಸನೆ ಕೊಟ್ಟರು.

# ಸಿಬಿಐ ಗ್ರಿಲ್

ಪ್ರಕರಣದ ಸಂಬಂಧ ಕೆಲವು ಅಧಿಕಾರಿಗಳನ್ನು ಮುಖಾಮುಖಿ ಕೂರಿಸಿಕೊಂಡು ತನಿಖೆ ನಡೆಸಿರೋ ಅಧಿಕಾರಿಗಳು, ಪಾರಿರಾಜನ್ ಬಗ್ಗೆ ಇಂಚಿಂಚು ಮಾಹಿತಿ ಸಂಗ್ರಹಿಸಿದ್ದಾರೆ. ಪಾರಿರಾಜನ್ ಬಂಧನದ ವೇಳೆ ಐಪಿಎಸ್ ಅಧಿಕಾರಿ ಅಲೋಕ್ ಕುಮಾರ್ ಒತ್ತಡ ಹೇರಿಲ್ಲ, ಬದಲಿಗೆ ಬಂಧನದ ಬಗ್ಗೆ ಮಾಹಿತಿ ಪಡೆದಿರೋದು ನಿಜ ಅಂತಾ ಸಿಬಿಐ ಮುಂದೆ ಕೆಜಿಎಫ್ ಠಾಣೆಯ ತನಿಖಾಧಿಕಾರಿ ಹೇಳಿಕೆ ನೀಡಿದ್ದಾರೆ.

# ಸಿಎಂ ತಿರುಗೇಟು

ವಿಧಾನಸಭೆಯ ಕಲಾಪದ ಆರಂಭದಲ್ಲೇ ಡಿವೈಎಸ್‌ಪಿ ಗಣಪತಿ ಆತ್ಮಹತ್ಯೆ ಪ್ರಕರಣವನ್ನು ಪ್ರಸ್ತಾಪಿಸಿ ಬಿಜೆಪಿ ನಿಲುವಳಿ ಸೂಚನೆಯ ಮಂಡನೆಗೆ ಮುಂದಾಯಿತು. ಈ ಹಂತದಲ್ಲಿ ಸ್ಪೀಕರ್ ಅವರು ಸಾರ್ವಜನಿಕ ಮಹತ್ವದ ವಿಷಯವನ್ನಾಗಿ ಪರಿವರ್ತಿಸಿ ಚರ್ಚೆಗೆ ಅವಕಾಶ ಕಲ್ಪಿಸುವುದಾಗಿ ತೀರ್ಪು ನೀಡಿದರು.

ಇದರ ನಡುವೆ ಗೃಹ ಸಚಿವ ಪರಮೇಶ್ವರ್ ಸ್ವಯಂ ಪ್ರೇರಿತ ಹೇಳಿಕೆ ನೀಡಲು ಮುಂದಾದರು. ಅದಕ್ಕೆ ಪ್ರತಿಪಕ್ಷಗಳು ಅವಕಾಶ ನೀಡದಿದ್ದಾಗ ಮಧ್ಯ ಪ್ರವೇಶಿಸಿದ ಸಿಎಂ, ಗಣಪತಿ ಆತ್ಮಹತ್ಯೆ ಪ್ರಕರಣವನ್ನು ನಾವು ಗಂಭೀರವಾಗಿ ಪರಿಗಣಿಸಿದ್ದೇವೆ. ಇದು ಸಾರ್ವಜನಿಕ ಮಹತ್ವದ ವಿಷಯ ಎಂದು ನಮಗೆ ಮನವರಿಕೆಯಾಗಿದೆ. ಯಾರದೇ ಜೀವ ಹಾನಿಯಾದರೂ ಅದು ದುಃಖದ ವಿಷಯ. ಸಾವು ಖುಷಿ ತರುವಂತದ್ದಲ್ಲ, ಅದು ರೈತರದ್ದಾಗಲಿ, ಅಧಿಕಾರಿಗಳದ್ದಾಗಲಿ ಜೀವ ಹಾನಿಗೆ ದುಃಖ ಪಡಬೇಕು.

ಗಣಪತಿ ಅವರ ಆತ್ಮಹತ್ಯೆ ಪ್ರಕರಣದ ಚರ್ಚೆಗೆ ಸರ್ಕಾರ ಸಿದ್ಧವಿದೆ. ಅದಕ್ಕೂ ಮೊದಲು ಗೃಹ ಸಚಿವರು ಸ್ವಯಂ ಪ್ರೇರಿತವಾಗಿ ಹೇಳಿಕೆ ನೀಡುತ್ತಾರೆ. ಅದಕ್ಕೆ ಅವಕಾಶ ಮಾಡಿಕೊಡಿ ಎಂದು ಪ್ರತಿಪಕ್ಷಗಳ ವಿರೋಧದ ನಡುವೆ ಮುಖ್ಯಮಂತ್ರಿ ಸಭಾಧ್ಯಕ್ಷರಿಗೆ ಮನವಿ ಮಾಡಿದರು.

# ಆಕ್ಷೇಪ

ವಿರೋಧ ಪಕ್ಷದ ಸಚೇತಕ ಸುನೀಲ್‌ಕುಮಾರ್, ತಾವು ಬೆಂಗಳೂರು ಅಭಿವೃದ್ಧಿ ಸಚಿವ ಕೆ.ಜೆ.ಜಾರ್ಜ್ ಅವರು ರಾಜೀನಾಮೆ ಕೊಟ್ಟಂತಿದೆ. ಸದನದಲ್ಲಿ ಆಡಳಿತ ಪಕ್ಷದ ಸದಸ್ಯರ ಆಸನಗಳೆಲ್ಲ ಖಾಲಿವೆ ಎಂದರು.

ಸಚಿವ ಟಿ.ಬಿ.ಜಯಚಂದ್ರ ಸೇರಿದಂತೆ ಕೇವಲ ನಾಲ್ಕು ಸಚಿವರು ಮಾತ್ರ ಈ ವೇಳೆ ಸದನದಲ್ಲಿ ಹಾಜರಿದ್ದರು.

ಸುನೀಲ್ ಅವರ ಮಾತಿಗೆ ದನಿಗೂಡಿಸಿದ ಬಿಜೆಪಿ ಹಿರಿಯ ನಾಯಕ ವಿಶ್ವೇಶ್ವರ ಹೆಗಡೆ ಕಾಗೇರಿ, ಮುಖ್ಯಮಂತ್ರಿ ಹಾಗೂ ಗೃಹಸಚಿವರು ಎಲ್ಲಿ ಹೋಗಿದ್ದಾರೆ. ಸರ್ಕಾರದ ದುಸ್ಥಿತಿಗೆ ಸದನದ ಪ್ರಾರಂಭದಲ್ಲೇ ಈ ಸ್ಥಿತಿ ಸರ್ಕಾರದ ಆಡಳಿತಕ್ಕೆ ಹಿಡಿದ ಕೈಗನ್ನಡಿಯಾಗಿದೆ ಎಂದು ಛೇಡಿಸಿದರು.

ಆಗ ವಿರೋಧ ಪಕ್ಷದ ಸದಸ್ಯರು ಬೆಂಬಲವಾಗಿ ಘೋಷಣೆ ಕೂಗಿದರು. ಮಾತು ಮುಂದುವರೆಸಿದ ಕಾಗೇರಿ ಆಡಳಿತ ಪಕ್ಷಕ್ಕೆ ಜವಾಬ್ದಾರಿ ಬೇಡವೆ, ಸದನದ ಗೌರವ ಕಾಪಾಡಬೇಡವೆ ಎಂದು ತರಾಟೆಗೆ ತೆಗೆದುಕೊಂಡರು.

ಜೀವರಾಜ್, ಬಸವರಾಜ್ ಬೊಮ್ಮಾಯಿ, ಸಿ.ಟಿ.ರವಿ ಇದಕ್ಕೆ ದನಿಗೂಡಿಸಿ, ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ ಎಂದರು.

ಅಷ್ಟರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಚಿವರಾದ ಕೆ.ಜೆ.ಜಾರ್ಜ್, ಕಾಗೋಡು ತಿಮ್ಮಪ್ಪ, ಪರಮೇಶ್ವರ್ ಆಗಮಿಸಿದರು.

# ಮಕ್ಕಳ ಸಾವು

ಸುದ್ದಿ ತಿಳಿಯುತ್ತಿದ್ದಂತೆ ಪೊಲೀಸರು ಹಾಗೂ ಅಗ್ನಿಶಾಮಕ ದಳದವರು ಘಟನಾ ಸ್ಥಳಕ್ಕೆ ತೆರಳಿ ಅವಶೇಷಗಳಡಿ ಸಿಲುಕಿ ಹಾಕಿಕೊಂಡಿರುವ ಮಕ್ಕಳನ್ನು ಹೊರತೆಗೆಯುವ ಕಾರ್ಯದಲ್ಲಿ ನಿರತರಾಗಿದ್ದಾರೆ.

ಗ್ರಾಮಸ್ಥರು ಸಹ ಈ ಕಾರ್ಯಕ್ಕೆ ಸಹಕಾರ ನೀಡಿದ್ದಾರೆ. ಮಕ್ಕಳ ಪೋಷಕರು ಶಾಲೆ ಮುಂದೆ ಜಮಾಯಿಸಿದ್ದು, ಅವರ ಆಕ್ರಂದನ ಮುಗಿಲು ಮುಟ್ಟಿತ್ತು.

ಜಿಲ್ಲಾಧಿಕಾರಿ ಎನ್.ಜಯರಾಂ, ಮಾಜಿ ಸಚಿವ ಸತೀಶ್ ಜಾರಕಿಹೊಳಿ ಸ್ಥಳಕ್ಕೆ ಭೇಟಿ ನೀಡಿ ಮಕ್ಕಳನ್ನು ಪ್ರಾಣಾಪಾಯದಿಂದ ರಕ್ಷಿಸುವಂತೆ ಅಗ್ನಿಶಾಮಕ ಸಿಬ್ಬಂದಿ ಹಾಗೂ ಪೊಲೀಸರಿಗೆ ಆದೇಶಿಸಿದ್ದಾರೆ.

ಸತತವಾಗಿ ಸುರಿಯುತ್ತಿರುವ ಮಳೆಯಿಂದ ಗೋಡೆ ನೆಂದು ಈ ಅವಘಡ ಸಂಭವಿಸಿದೆ ಎನ್ನಲಾಗಿದೆ.

# ರಾಜೀನಾಮೆಗೆ ಪಟ್ಟು

ಬೆಂಗಳೂರು ಅಭಿವೃದ್ಧಿ ಸಚಿವ ಕೆ.ಜೆ.ಜಾರ್ಜ್ ರಾಜೀನಾಮೆಗೆ ಪ್ರತಿಪಕ್ಷಗಳು ಪಟ್ಟು ಹಿಡಿದಿದ್ದರಿಂದ ಇಂದು ಸದನ ಸಮಾವೇಶಗೊಳ್ಳುತ್ತಿದ್ದಂತೆ ವಿರೋಧ ಪಕ್ಷದ ನಾಯಕ ಜಗದೀಶ್ ಶೆಟ್ಟರ್, ಜೆಡಿಎಸ್ ರಾಜ್ಯಾಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ಉಪನಾಯಕ ವೈಎಸ್‌ವಿ ದತ್ತ ಸೇರಿದಂತೆ ಪ್ರತಿ ಪಕ್ಷಗಳ ಸದಸ್ಯರು ಡಿವೈಎಸ್ಪಿ ಗಣಪತಿ ಆತ್ಮಹತ್ಯೆ ಪ್ರಕರಣವನ್ನು ನಿಲುವಳಿ ಸೂಚನೆಯಡಿ ಪ್ರಸ್ತಾಪಿಸಲು ಮುಂದಾದರು.

ಜಗದೀಶ್ ಶೆಟ್ಟರ್ ಮಾತನಾಡಿ, ಗೃಹ ಇಲಾಖೆಯಲ್ಲಿ ಸೂಪರ್ ಮಿನಿಸ್ಟಾರ್ ಇದ್ದಾರೆ. ಈ ಆತ್ಮಹತ್ಯೆ ಪ್ರಕರಣವನ್ನು ಮುಚ್ಚಿ ಹಾಕುವ ಯತ್ನ ನಡೆಯುತ್ತಿದೆ.

ಅಧಿಕಾರಿಗಳು ಒಬ್ಬರ ಹಿಂದೆ ಒಬ್ಬರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ವಿಚಾರವನ್ನು ನಿಲುವಳಿ ಸೂಚನೆಯಡಿ ಪ್ರಸ್ತಾಪಿಸಲು ಅವಕಾಶ ಮಾಡಿಕೊಡಬೇಕೆಂದು ಸಭಾಧ್ಯಕ್ಷ ಕೆ.ಬಿ.ಕೋಳಿವಾಡ ಅವರಲ್ಲಿ ಮನವಿ ಮಾಡಿದರು. ಅದಕ್ಕೆ ಜೆಡಿಎಸ್ ಸದಸ್ಯರು ದನಿಗೂಡಿಸಿ ಸಿಬಿಐ ತನಿಖೆಗೆ ವಹಿಸುವಂತೆ ಆಗ್ರಹಿಸಿದರು.

# ಕಾರ್ಮಿಕರಿಂದ ಪ್ರತಿಭಟನೆ

**ನೆಲಮಂಗಲ, ಜು.11**- ಇಲ್ಲಿನ ಮಾದನಾಯಕನಹಳ್ಳಿಯಲ್ಲಿರುವ ಕಾರ್ಲೆ ಗಾರ್ಮೆಂಟ್ಸ್ ಲಾಕೌಟ್ ಆಗಿದ್ದು, ಕಾರ್ಮಿಕರು ಆತಂಕಗೊಂಡಿದ್ದಾರೆ.

ನೂರಾರು ಕಾರ್ಮಿಕರು ಇಂದು ಬೆಳಗ್ಗೆ ಕಾರ್ಖಾನೆ ಮುಂದೆ ಪ್ರತಿಭಟನೆ ನಡೆಸುತ್ತಿದ್ದು, ಯಾವುದೇ ಮುನ್ಸೂಚನೆ ನೀಡದೆ ಕಾರ್ಖಾನೆಯನ್ನು ಬಂದ್ ಮಾಡಲಾಗಿದೆ ಎಂದು ಆರೋಪಿಸ ಲಾಗಿದೆ.

ಸ್ಥಳಕ್ಕೆ ಧಾವಿಸಿರುವ ಮಾದನಾಯಕನಹಳ್ಳಿ ಠಾಣೆ ಪೊಲೀಸರು ಯಾವುದೇ ಅಹಿತಕರ ಘಟನೆ ನಡೆಯದಂತೆ ಮುನ್ನೆಚ್ಚರಿಕೆ ಕ್ರಮ ಕೈಗೊಂಡಿದ್ದಾರೆ.

ASM TECHNOLOGIES LTD
(CIN L85110KA1992PLC013421)
Regd Office: 80/2 Lusanne Court
Richmond Road, Bangalore - 560025

NOTICE

Notice is hereby given pursuant to Regulation 29 read with Regulation 47 of SEBI (Listing Obligations and Disclosure Requirements) Regulations 2015 that a Meeting of the Board of Directors of the Company will be held on Saturday, the 23rd of July 2016, to inter alia, take on record the Audited financial Results (standalone) and Unaudited financial Results (consolidated) of the company, for the quarter and year ended 30th June, 2016. For further details please visit the company`s website-www.asmltd.com and also the website of BSE Ltd, www.bseindia.com.

By Order of the Board
For ASM Technologies Limited
Sd/
Company Secretary

Place: Bangalore
Date: July 8th, 2016

Ro.No.804

ADOR MULTIPRODUCTS LIMITED
Regd. Off. & Plant: A 13 & 14, III Stage, Peenya Industrial Estate, Bengaluru - 58 CIN L85110KA1948PLC000545
Tel. No. (91) 080-2836 0271, Fax No. (91) 080-2836 1631,
E-mail: cs.adormultiproducts@gmail.com
Website:www.adormultiproducts.com

NOTICE OF 68TH ANNUAL GENERAL MEETING, BOOK CLOSURE DATES AND E-VOTING

NOTICE is hereby given that the 68th Annual General Meeting of the Members of the Company will be held at 9.00 am on Thursday, 4th August 2016, at "Rohini Hall" Hotel Ajantha, 22-A, M.G Road, Bengaluru - 560 001 to transact the business as set forth in the Notice dated 1st July, 2016 convening AGM.

The physical copy of the Annual Report including notice convening the AGM has been posted to all the shareholders and the posting has been completed on 9th July, 2016. The same have been sent by electronic mode to all the Members whose e-mail addresses are registered with the Company/Depository Participant(s) for communication purpose.

Pursuant to section 91 of the Companies Act, 2013 and Reg. 42 of SEBI (Listing Obligations and Disclosure Requirements) Regulations, 2015, the Register of Members and Share Transfer Books of the Company shall remain closed from 30th July, 2016 to 4th August 2016 [both days inclusive] for the purpose of AGM.

The members are hereby informed that pursuant to Reg. 44 of SEBI (Listing Obligations and Disclosure Requirements) Regulations, 2015 and Section 108 of the Companies Act, 2013, read with Rule 20 of the Companies (Management and Administration) Rules, 2014, the Company is pleased to provide its Members, the facility to cast their vote by electronic means ("remote e-voting") on all the Resolutions set forth in the said Notice. The details pursuant to the provisions of the Companies Act, 2013 and the Rules are given hereunder:

1. The business may be transacted through voting by electronic means.
2. Date and time of commencement of remote e-voting: 1st August, 2016 at 9.00 a.m.
3. Date and time of end of remote e-voting: 3rd August, 2016 at 5.00 p.m.
4. Cut Off Date: 28th July, 2016.
5. Any person, who acquires shares of the Company and becomes member of the Company after despatch of the Notice of AGM and holding shares as of the cut-off date i.e. 28th July, 2016, may obtain the login ID and password by sending a request at **evoting@nsdl.co.in** or **ravi@ccsl.co.in. The detailed** procedure of generating the Login ID and Password is provided in the Notice of AGM which is available on Company's website **http://adormultiproducts.com** and on NSDL website **www.evoting.nsdl.com**, if the member is already registered with NSDL for e-voting, existing User ID and Password can be used for casting vote.
6. The members may note –

a) Remote e-voting shall not be allowed beyond 3rd August, 2016 at 5.00 P.M.

b) The facility for voting through Polling Paper shall be made available at the AGM and the members attending the meeting who have not cast their vote by remote e-voting shall be able to exercise their right at the meeting through polling paper;

c) A member may participate in the general meeting even after exercising his right to vote through remote e-voting but shall not be allowed to vote again in the meeting; and

d) A person whose name is recorded in the Register of Members or in the Register of Beneficial Owners maintained by the Depositories as on the cut-off date only shall be entitled to avail the facility of remote e-voting as well as voting in the Annual General Meeting;

7. The notice of AGM is available on the Company's website http://adormultiproducts.com and also on NSDL website www.evoting.nsdl.com
8. In case of any queries or issue regarding e-voting please contact NSDL at the following toll free no.:1800-222-990 or email to evoting@nsdl.co.in

Place: Bengaluru
Date : 11.07.2016


By order of the board
Gauarv Kumar Jain
Company Secretary

Ro.No.803

# Repayment time to peak soon for market loans

## Bengal, some others to face new and swelling debt headache from FY18

NAMRATA ACHARYA
Kolkata, 11 July




Some debt-ridden states, including West Bengal, are likely to face increasing redemption pressure from 2017-18, when the repayment schedule of their market loans begins.

Data from the Reserve Bank of India (RBI) showed this obligation for Bengal would be ₹11,610 crore in 2017-18, against ₹3,200 crore in 2016-17, a more than three-fold rise. On average, the share of market loans or state development loans for Bengal in its total debt burden has been close to ₹3,000 crore yearly. Its market loan repayment obligation would be the highest among all states in that year.

States which could also see such a rise include Maharashtra, Tamil Nadu (TN) and Uttar Pradesh (UP).

RBI, in a recent report on state finances for 2015-16, said, "At the end of March 2015, around 68.5 per cent of state development loans (SDLs) were in the maturity bucket of five years and above. The increase in market borrowings of state governments since 2008-09 entails large repayment obligations from 2017-18 onwards."

For Maharashtra, TN and UP, the market loan repayment burden would increase in 2018-19, as they have started heavy market borrowing in 2008-09. RBI says in that year, the highest market loan repayment obligation will be UP's at ₹12,690 crore, against ₹4,420 crore in 2017-18. West Bengal's would be next at ₹12,400 crore, against Rs 11,610 crore in 2017-18. Then Maharashtra at ₹17,760 crore, against ₹8,520 crore in 2017-18.

Starting 2007, states have been borrowing heavily through market loans. The borrowings were mostly through SDLs, of 20-year maturity, and mostly subscribed to by public sector banks and other government undertakings.

"Due to the financial crisis in 2007-08, states started relying on market borrowing, which led to a spike in SDLs," said Anuja Shah, economist, CARE Ratings.

Also, the government had been increasingly encouraging states to opt for market loans from 2007.

"There has been a gradual change in the mix of borrowings of the states beginning 2007, as both the central government and RBI have been encouraging states on market borrowings. The idea was to encourage a market-linked borrowing rate, as states with weaker profiles would have to pay more and those with strong profiles had to pay less. Unfortunately, spreads between borrowing costs of different states at the same auction tend to be narrowly clustered, with market forces not differentiating much between the credit profile of various states, " said Jayanta Roy, senior vice-president at ICRA.

In 2003, the central government had announced a debt swap scheme, allowing state governments to replace high-cost borrowing with lesser-cost ones from the small savings pool and market borrowing.

"It is entirely up to the central government, if it allows the states to prepay or roll-over the loans," said a senior official. A Mamata-Modi bonhomie would be important here.

# Airtel, Aircel spectrum trading deal cleared

PRESS TRUST OF INDIA
New Delhi, 10 July

The telecom ministry is learnt to have cleared the ₹3,500-crore 4G spectrum trading deal between service providers Bharti Airtel and Aircel. "The spectrum trading deal between Bharti Airtel and Aircel was cleared by the telecom minister on July 4," an official source told *PTI*.

As on July 4, Law and IT Minister Ravi Shankar Prasad was in-charge of the Telecom Ministry as well.

Airtel has entered into an agreement with Aircel to acquire rights to use 4G spectrum of Aircel in eight telecom circles for ₹3,500 crore.

Bharti Airtel declined to comment when contacted by *PTI*. Responding to the story, Bharti Airtel in a stock exchange filing said it has acquired rights to use 4G spectrum from Aircel in "six circles". Referring to its earlier intimation regarding acquisition of rights to use 20 MHz 2300 Band 4G TD spectrum from Aircel, the filing said: "We are pleased to share that the proposed transaction has successfully concluded for 6 out of 8 circles ... following the receipt of all necessary approvals and satisfying all the conditions (including conditions stated in the Spectrum Trading Guidelines)".

The circles are Tamil Nadu (including Chennai), Bihar, Jammu and Kashmir, West Bengal, Assam and North East.

# BJP offers quota for extremely backward within OBC reservation

ARCHIS MOHAN
New Delhi, 10 July

In a bid to woo non-Yadav other backward classes ahead of the Uttar Pradesh Assembly polls next year, Bharatiya Janata Party (BJP) chief Amit Shah on Saturday announced an alliance with the Suheldeo Bharatiya Samaj Party. This comes on the heels of Apna Dal Lok Sabha member Anupriya Patel being included in the Union council of ministers and Keshav Prasad Maurya made the BJP Uttar Pradesh unit chief. Patel is a Kurmi and Maurya a Kushwaha – both being important non-Yadav OBC castes of eastern UP. The Suheldeo Bharatiya Samaj Party represents Rajbhar caste comprising primarily masons. It's an important non-Yadav caste with significant presence in eastern UP.

**Eastern UP has for the past two decades been a weak area for the BJP**

Eastern UP has for the past two decades been a weak area for the BJP. The party has only 13 legislators from eastern UP's 102 Assembly seats, although it swept the 2014 Lok Sabha in the region on the back of Narendra Modi contesting from Varanasi and alliance with the Apna Dal. The UP Assembly has 403 seats.

The BJP believes the key to success in eastern UP is to isolate Yadav and Muslim support base of the Samajwadi Party and consolidate all other castes in its favour.

To woo non-Yadav OBCs, the BJP's trump card is going to be the 'Karpoori Thakur formula'. It means a quota or quotas within a larger quota. The Narendra Modi government is mulling a proposal to introduce a two- or three-layered category in the OBC reservation of 27 per cent in government jobs and educational institutions. It is also likely to recommend increase of the current annual income ceiling for the creamy layer in the category from ₹6 lakh to 8.5 lakh.

The government has asked the National Commission for Backward Classes to revive an old proposal to trifurcate the OBC quota into three categories – extremely backward classes or EBCs; most backward classes or MBCs; and OBCs. Caste groups in each category will be eligible for a nine per cent quota each from the consolidated 27 per cent.

According to sources, there is enough empirical as well as anecdotal evidence that the OBC quota has been monopolised by dominant caste groups within the category ever since it was implemented in 1993. In the context of Uttar Pradesh, the Yadavs, given their relative prosperity and access to education, have benefited from the reservations while EBCs and MBCs have lagged.

This is in contrast to the neighbouring Bihar, where the then chief minister Karpoori Thakur made two separate list within the OBCs, helping the Yadavs and Kurmis, thanks to their numerical strength, benefit and find greater political representation. This is true for Tamil Nadu as well, which has separate lists within the OBC category.

In 2010, Bihar Chief Minister Nitish Kumar introduced a similar formula within the 15.5 per cent reservation for the dalits by distinguishing between the 'mahadalits' and dalits. The list identified the Paswans as dalits, which due to their relative affluence, were managing to get most benefits.

However, any such sub-categorisation at the Centre in the OBC list would require a fresh survey of which among the OBCs are extremely backward and most backward, and also parameters to judge whether certain castes have monopolised the benefits from the reservation policy.

But, such concerns are not stopping the BJP in making it a Yadav versus non-Yadav issue in the UP. Shah and BJP leaders have already identified Yadavs as perpetrators of lawlessness in Uttar Pradesh. They, along with Muslims, or so the BJP's argument goes, have a hegemony over the current Akhilesh Yadav-led government and dominate other castes, particularly the extremely backward and dalits.

During Saturday's public rally at Mau in Uttar Pradesh, Shah also remembered Suheldeo as the protector of Hindu religion and enemy of 'foreign invaders'. Suheldeo is an 11th century king from the Rajbhar community and Shah has taken to marking his anniversary every year in March and invoking him in his speeches.

At one such event in 2015, Shah had said: "Today is the beginning of bringing the backward castes and others under a single umbrella. This is needed because despite reservation policy, only one caste (a hint at the Yadavs) has monopolised all the benefits."

Prime Minister Modi will be in Gorakhpur to lay the foundation stone for All India Institute of Medical Sciences on July 22, while Shah has visited the region twice in the past week. The OBCs account for 54 per cent of UP's population. Among the OBCs, Yadavs are numerically the strongest caste. Last week, the PM increased the representation of non-Yadav OBCs as well as those from eastern UP in the council of ministers. Meanwhile, EBC leaders such as Swami Prasad Maurya have deserted Bahujan Samaj Party chief Mayawati in recent weeks and they could join the BJP.

# Teachers to be held accountable, says Javadekar

PRESS TRUST OF INDIA
Pune, 10 July

Asserting that the role of teachers is crucial in nation building and transformation of education, Union Minister for Human Resource Development (HRD) Prakash Javadekar (*pictured*) on Sunday said "accountability" will be introduced in the education system for the teachers.

In his first public programme after assuming charge as the HRD minister, Javadekar felicitated educationists during a function held at Ferguson College here.

"There are issues and there are challenges, however we have to work as a team to address the issues in education field to improve the quality of education system and in this process, teachers have to play a crucial role in the transformation of education system," Javadekar said.

Teachers should encourage the students to dream big and give them life skills, technical skills and high values, he said.

"I know there are issues with teachers' training, there are issues with quality of education, but teachers are the ones who can give the right solution, so I appeal all the teachers to work positively."

"Teachers will be appreciated for their good work and we will use accountability for teachers in the education system as teachers should be answerable and accountable," he added.



# Police busts gang selling CDR

PRESS TRUST OF INDIA
New Delhi, 10 July

Delhi Police has busted a big snooping racket involving several private detective agencies and arrested four persons for allegedly selling call detail records (CDRs) of thousands of people collected through the help of a UP Police constable based in Kanpur.

Senior police officers said the gang is suspected to have procured and supplied thousands of sensitive CDRs and sold to clients seeking to snoop in matrimonial matters, legal disputes, business rivalries, financial enquiries as well as talks between high profile persons including politicians and top bureaucrats.

A team of Crime Branch of Delhi Police was working on the information about illegal sale of CDRs through private detective agencies and caught the accused Pankaj Tiwari, from his office selling CDR red handed through a decoy on July 4, said Ravindra Yadav, Joint Commissioner(Crime) of Police.

Tiwari obtained CDRs through a man Jaiveer Singh who claimed to be owner of a TV channel who has also been arrested. Jaivir revealed that he procured the CDRs from a UP Police constable Narendra Kumar posted with the Surveillance Cell of IG Kanpur in UP.

Delhi Police has got the custody of Kumar an accused in the snooping case from Kanpur police, the officer said.

Other arrested include Aditya Sharma and Sanjiv Chaudhary. Aditya was earlier arrested by Delhi Police for selling CDRs of high profile persons in 2013.

# SP banks on welfare politics to buck anti-incumbency

MAYANK MISHRA
New Delhi, 10 July



**DOLES GALORE IN UP**

- ₹3,300 crore Samajwadi Pension Scheme for women
- Various pension schemes to cover 11.8 million people
- ₹400 scheme for marriage of daughters
- DBT introduced to give subsidies for procuring quality seeds to one million farmers
- ₹840 crore scheme to give scholarship to students from the minority community

Source: UP budget speech for 2016–17

While travelling in Delhi Metro, you are likely to come across posters listing out the achievements of the Samajwadi Party (SP) government in Uttar Pradesh (UP). One of them says that UP is the only state with Metro running in four of its cities. The other one announces the arrival of 'hi-tech police' in the state. And, yet another one talks about how women have been empowered in the state.

Through such posters and other campaigns, the ruling SP, best known so far for its aggressive espousal of the social justice plank, is trying to push a development agenda ahead of the crucial Assembly elections in the country's most populous state.

But, that seems to be on the face of it. Perhaps taking a cue from the recent electoral successes of Mamata Banerjee in West Bengal, J Jayalalithaa in Tamil Nadu and Nitish Kumar in Bihar, the SP, too, is banking on a slew of welfare schemes, other than working on roads and electricity (*bijli-sadak*), to improve its electoral prospects.

"Ever since its launch, the Samajwadi pension scheme has received good response. The UP government, therefore, has expanded its coverage this year to include many more families," says an official associated with the state government.

The ₹3,327-crore Samajwadi pension scheme is to cover 5.5 million families this year compared to 4.5 million last year. Under the scheme, ₹500 is directly credited every month to the accounts of the senior woman member of each of the identified family. This is in addition to other running pension schemes such as monthly pension for the elderly, for widows and the physically challenged. Chief Minister Akhilesh Yadav announced in his Budget speech this year that with the expansion of the Samajwadi Pension Scheme, 11.8 million people would get the benefits of multiple pension schemes in the state.

This is one of many schemes the government has launched recently. The Yadav government recently launched direct benefit transfer (DBT) for subsidies given to farmers to procure quality seeds. It enhanced the insurance amount to be given to farmers in case of unfortunate accidental deaths. It also launched a ₹400-crore scheme to give assistance to poor families of scheduled castes, scheduled tribes, minorities, and others for marriage of daughters. Besides, there is a ₹840-crore scheme for giving scholarships to students of the minority community. The government has set an ambitious target of giving ₹93,212 crore as crop loan to farmers this financial year.

Experts say the idea of reorienting the government's focus was discussed in the core group of the Samajwadi Party after the 2014 Lok Sabha elections debacle. It was decided to go all out for selected ambitious projects to be completed before the 2017 Assembly elections and launching a slew of welfare schemes targeted at different social groups. "It seemed inconceivable a few years ago. But, the SP is going to face the electorate on the development agenda and test the effectiveness of its welfare programmes," the official quoted above says.

However, the most ambitious of promises that the SP government has made is on the power front. Currently reeling under many hours of power cut, the government has promised at least 16 hours of electricity in rural areas and 22 hours in urban areas from October this year. It claims to augment the state's power availability from the existing 11,000-Mw to 21,000-Mw. The government has also promised to electrify all villages by the end of this year. "It is going to be a tall ask given the state of distribution and transmission network in the state," says a Lucknow-based former bureaucrat who retired recently.

Incidentally, recent electoral successes of Banerjee in West Bengal and Nitish Kumar in Bihar are largely attributed, among others, to improvement in the power situation in their respective states. Both of them successfully also ran schemes of giving bicycles to school girls.

Jayalalithaa, on the other hand, promised a series of freebies and bucked anti-incumbency in Tamil Nadu. Her promises include waiver of all farm loans, free laptop with internet connection to class 10 and 12 students, maternity assistance of ₹18,000, 100 units of electricity free for every two months, and 50 per cent subsidy to women to buy mopeds and scooties.

Experts say while Yadav's promises look more modest compared to Jayalalithaa, he has compensated that by focusing on roads and electricity, something that Mamata Banerjee and Nitish Kumar have done with some success. Experts also say that whether it enhances the ruling party's electoral prospect will be known only after elections, but the fact that the SP is going to elections with a focus on development agenda is a change from the past. "For nearly three decades, elections in UP have been fought on the basis of symbols. The SP under Akhilesh Yadav is trying to bring the development agenda to the forefront," says Lucknow-based political commentator Sudhir Panwar.

**Hindustan Newsprint Limited**
(A Govt. of India Enterprise. A Subsidiary of HPC Ltd.)
Newsprint Nagar PO, Kottayam – 686 616.
Phone: 04829 256211 – 21 Fax: 04829 251911, 257587
Website: www.hnlonline.com E-mail: hnl@hnlonline.com

Please visit our website for tender document for supply of Machine Clothing, i.e, Press Felts and Dryer Screens, and Forming Roll Shrink Sleeve.

**ZODIAC-JRD-MKJ LIMITED**
**NOTICE**

Pursuant to the amended Clause 41 of the Listing Agreement with the Stock Exchange, a Meeting of the Board of Directors of **ZODIAC - JRD - MKJ Limited** has been convened on Thursday, 28th July, 2016 at 3.00 p.m. at the registered office of the Company to take on record the Unaudited financial results of the Company for the quarter ended on 30th June, 2016.

For and behalf of the Board of Directors
For ZODIAC-JRD-MKJ Limited.,
Sd/-
Jayantilal Jhaveri
Chairman
Date : 11/07/2016
Place : Mumbai

**ADOR MULTIPRODUCTS LIMITED**
Regd. Off. & Plant: A 13 & 14, III Stage, Peenya Industrial Estate, Bengaluru - 58 CIN L85110KA1948PLC000545
Tel. No. (91) 080-2836 0271, Fax No. (91) 080-2836 1631,
E-mail: cs.adormultiproducts@gmail.com
Website:www.adormultiproducts.com

**NOTICE OF 68TH ANNUAL GENERAL MEETING, BOOK CLOSURE DATES AND E-VOTING**

NOTICE is hereby given that the 68th Annual General Meeting of the Members of the Company will be held at 9.00 am on Thursday, 4th August 2016, at "Rohini Hall" Hotel Ajantha, 22-A, M.G Road, Bengaluru - 560 001 to transact the business as set forth in the Notice dated 1st July, 2016 convening AGM.

The physical copy of the Annual Report including notice convening the AGM has been posted to all the shareholders and the posting has been completed on 9th July, 2016. The same have been sent by electronic mode to all the Members whose e-mail addresses are registered with the Company/Depository Participant(s) for communication purpose.

Pursuant to section 91 of the Companies Act, 2013 and Reg. 42 of SEBI (Listing Obligations and Disclosure Requirements) Regulations, 2015, the Register of Members and Share Transfer Books of the Company shall remain closed from 30th July, 2016 to 4th August 2016 [both days inclusive] for the purpose of AGM.

The members are hereby informed that pursuant to Reg. 44 of SEBI (Listing Obligations and Disclosure Requirements) Regulations, 2015 and Section 108 of the Companies Act, 2013, read with Rule 20 of the Companies (Management and Administration) Rules, 2014, the Company is pleased to provide its Members, the facility to cast their vote by electronic means ("remote e-voting") on all the Resolutions set forth in the said Notice. The details pursuant to the provisions of the Companies Act, 2013 and the Rules are given hereunder:

1. The business may be transacted through voting by electronic means.
2. Date and time of commencement of remote e-voting: 1st August, 2016 at 9.00 a.m.
3. Date and time of end of remote e-voting: 3rd August, 2016 at 5.00 p.m.
4. Cut Off Date: 28th July, 2016.
5. Any person, who acquires shares of the Company and becomes member of the Company after despatch of the Notice of AGM and holding shares as of the cut-off date i.e. 28th July, 2016, may obtain the login ID and password by sending a request at **evoting@nsdl.co.in** or **ravi@ccsl.co.in. The detailed** procedure of generating the Login ID and Password is provided in the Notice of AGM which is available on Company's website **http://adormultiproducts.com** and on NSDL website **www.evoting.nsdl.com**, if the member is already registered with NSDL for e-voting, existing User ID and Password can be used for casting vote.
6. The members may note –

a) Remote e-voting shall not be allowed beyond 3rd August, 2016 at 5.00 P.M.

b) The facility for voting through Polling Paper shall be made available at the AGM and the members attending the meeting who have not cast their vote by remote e-voting shall be able to exercise their right at the meeting through polling paper;

c) A member may participate in the general meeting even after exercising his right to vote through remote e-voting but shall not be allowed to vote again in the meeting; and

d) A person whose name is recorded in the Register of Members or in the Register of Beneficial Owners maintained by the Depositories as on the cut-off date only shall be entitled to avail the facility of remote e-voting as well as voting in the Annual General Meeting;

7. The notice of AGM is available on the Company's website http://adormultiproducts.com and also on NSDL website www.evoting.nsdl.com
8. In case of any queries or issue regarding e-voting please contact NSDL at the following toll free no.:1800-222-990 or email to evoting@nsdl.co.in

By order of the board
Gauarv Kumar Jain
Company Secretary

Place: Bengaluru
Date : 11.07.2016

**Business Standard**
**BENGALURU EDITION**

Printed and Published by Afroz Khan on behalf of Business Standard Private Limited and printed at MNS Printers Private Limited, 345/4, Bhattrahalli, Old Madras Road, Bengaluru-560 049 and published at A-1, First Floor, 25/3, Lavelle Road, Bengaluru -560 001

Editor : A K Bhattacharya

RNI NO: 71187/1998

Readers should write their feedback at **feedback@bsmail.in**
Ph: 080-22484968 Fax : 080-22484967

For Subscription and Circulation enquiries please contact:
**Ms. Mansi Singh**
**Head-Customer Relations**
Business Standard Private Limited.
3rd & 4th floor, Building H,
Paragon Condominium, Opp Century Mills,
P B Marg, Worli, Mumbai - 400 013
**E-mail: subs_bs@bsmail.in**
**Tel: 1800-11-4300 (Toll Free)**
"or **sms**, SUB BS to 57007"

**DISCLAIMER** News reports and feature articles in Business Standard seek to present an unbiased picture of developments in the markets, the corporate world and the government. Actual developments can turn out to be different owing to circumstances beyond Business Standard's control and knowledge. Business Standard does not take any responsibility for investment or business decisions taken by readers on the basis of reports and articles published in the newspaper. Readers are expected to form their own judgement.
Unless explicitly stated otherwise, all rights reserved by M/s Business Standard Pvt. Ltd. Any printing, publication, reproduction, transmission or redissemination of the contents, in any form or by any means, is prohibited without the prior written consent of M/s Business Standard Pvt. Ltd. Any such prohibited and unauthorised act by any person/legal entity shall invite civil and criminal liabilities.

**No Air Surcharge**